ಬೋರವೆಲ್‌ಗಳನ್ನು ಹಾಕಿದ್ದೀರಿ, ಅಲ್ಲಲ್ಲಿ ಈ ವರ್ಷ 93-94ರಲ್ಲಿ ವರ್ಲ್ಡ್‌ಬ್ಯಾಂಕಿನವರು ಒಂದು ಪಕ್ಷ ಒಪ್ಪದೇ ಇದ್ದರೆ ಸ್ಟೇಟ್ ಸೆಕ್ಟರ್‌ನಲ್ಲಿ ಆ ಸ್ಕೀಮ್‌ಗಳನ್ನು ಕಂಪ್ಲೀಟ್ ಮಾಡಲು ಸಾಧ್ಯವೇ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ವರ್ಲ್ಡ್‌ಬ್ಯಾಂಕಿನವರು ಒಪ್ಪದೇ ಇರಲು ಸಾಧ್ಯವೇ ಇಲ್ಲ. ಎಲ್ಲಾ ವ್ಯವಹಾರಗಳು ಪೂರ್ತಿಯಾಗಿವೆ. ಎಲ್ಲಾ ಒಪ್ಪಂದಗಳೂ ಪೂರ್ತಿಯಾಗಿದೆ. ರುಜು ಮಾತ್ರ ಬೇಕಾಗಿದೆ. ಆ ಆಧಾರದ ಮೇಲೆ ನಾವು ಅಂಟಿಸಿಪೇಟಿಂಗ್ ಸ್ಕ್ಯಾಂಕ್ಷನ್ ಕೆಲಸಗಳನ್ನು ಶುರು ಮಾಡಿದ್ದೇವೆ. ಇದರಲ್ಲಿ ಯಾವುದೇ ಅನುಮಾನ ಬೇಕಾಗಿಲ್ಲ. ಅವರ ಸ್ಕೀಮ್‌ನಲ್ಲೇ ಈ ಕೆಲಸಗಳನ್ನು ಮುಂದುವರಿಸಲಾಗುವುದು.

ಪಟೇಲರು ಹಾಗೂ ಶ್ಯಾನುಭೋಗರುಗಳಿಗೆ ಅಡ್‌ಹಾಕ್ ನಿವೃತ್ತಿ ವೇತನ.

332 (21): ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯದ ಆನುವಂಶಿಕ ಹಕ್ಕು ರದ್ದತಿ ಕಾಯ್ದೆಯಂತೆ ಹಕ್ಕು ಕಳೆದುಕೊಂಡ ಪಟೇಲ್-ಶ್ಯಾನುಭೋಗರುಗಳಿಗೆ ಮಾಹೆಯಾನ 100.00 ರೂ.ಗಳಂತೆ ಈವರೆಗೆ ಅನುಕಂಪ ಭತ್ಯೆ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈಗ ರಾಜ್ಯದ ಮಾಜಿ ಶ್ಯಾನುಭೋಗರುಗಳಿಗೆ ಮಾತ್ರ ತಿಂಗಳಿಗೆ 500.00 ರೂ. ಅಡ್‌ಹಾಕ್ ಪೆನ್ಷನ್ ನೀಡುತ್ತಿದ್ದು ಪಟೇಲರುಗಳಿಗೆ ಅಡ್‌ಹಾಕ್ ಪೆನ್ಷನ್ ನೀಡದೆ ತಾರತಮ್ಯ ಮಾಡಿರುವುದಕ್ಕೆ ಕಾರಣವೇನು;

ಇ. ಈಗಲಾದರೂ ಮಾಜಿ ಪಟೇಲರುಗಳಿಗೆ ಶ್ಯಾನುಭೋಗರುಗಳಿಗೆ ನೀಡುತ್ತಿರುವಂತೆ ಮಾಹೆಯಾನ ಅಡ್‌ಹಾಕ್ ಪೆನ್ಷನ್ ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):–

ಅ. ಹೌದು.,

ಆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ. ಪರಿಶೀಲಿಸಲಾಗುತ್ತಿದೆ.

ಶ್ರೀ ಎ. ವಿ. ಉಮಾಪತಿ:– ಕರ್ನಾಟಕ ರಾಜ್ಯದ ಆನುವಂಶಿಕ ಹಕ್ಕು ರದ್ದತಿ ಕಾಯ್ದೆಯಂತೆ ಹಕ್ಕು ಕಳೆದುಕೊಂಡ ಪಟೇಲ್ ಶ್ಯಾನುಭೋಗರುಗಳಿಗೆ ಮಾಹೆಯಾನ 100.00 ರೂ.ಗಳಂತೆ ಈವರೆಗೆ ಅನುಕಂಪ ಭತ್ಯೆ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಈಗ ಶ್ಯಾನುಭೋಗರುಗಳಿಗೆ 500.00 ರೂ.ಗಳನ್ನು ಅಡ್‌ಹಾಕ್ ಪೆನ್ಷನ್ ಎಂದು ನೀಡುತ್ತಿದ್ದಾರೆ. ಆದರೆ ಪಟೇಲರಿಗೆ ಆ ರೀತಿ ನೀಡುತ್ತಿಲ್ಲ. ಈ ರೀತಿ ಪಟೇಲರಿಗೆ ನೀಡದೇ ತಾರತಮ್ಯ ಮಾಡಲು ಕಾರಣ ಏನು ಎಂದು ಕೇಳಿರುವುದಕ್ಕೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಶ್ಯಾನುಭೋಗರು ಮತ್ತು ಪಟೇಲರು ಒಂದೇ ಸಮಯದಲ್ಲಿ ಕೆಲಸ ಮಾಡತಕ್ಕಂಥ ಒಂದು ಕಾಲ, ಆದರೆ ಶ್ಯಾನುಭೋಗರುಗಳಿಗೆ ಹಾಗೂ ಪಟೇಲರುಗಳಿಗೂ ಹಿಂದೆ 100 ರೂ. ಕೊಡುತ್ತಿದ್ದರು. ಆದರೆ ಈಗ ಏಕ್‌ದಮ್ ಶ್ಯಾನುಭೋಗರುಗಳಿಗೆ 100 ರೂ. ಇದ್ದದ್ದನ್ನು 500.00 ರೂ. ಮಾಡಿದರು. ಆದರೆ ಪಟೇಲರುಗಳಿಗೆ ಆ ರೀತಿ ಕೊಡುತ್ತಿಲ್ಲ. ಈ ರೀತಿ ಶ್ಯಾನುಭೋಗರುಗಳಿಗೆ ಕೊಡಬೇಕಾದರೆ

ಪಟೇಲರು ಗಮನಕ್ಕೆ ಬರಲಿಲ್ಲವೇ. ಇವೊತ್ತು ಪಟೇಲರ ಪರಿಸ್ಥಿತಿ ಏನಾಗಿದೆ ಅಂದರೆ ಗಾದೆ ಹೇಳುತ್ತಾರಲ್ಲಾ ಊರನ್ನೆಲ್ಲಾ ಕಾದು ಬಡ ಬೋರೇಗೌಡ ಆದ ಎಂಬ ರೀತಿ ಆಗಿದೆ. ಈಗ ತಿನ್ನಲಿಕ್ಕೆ ಅನ್ನ ಇಲ್ಲದೇ ಇರತಕ್ಕ ಪರಿಸ್ಥಿತಿಯಲ್ಲಿ ಪಟೇಲರು ಇದ್ದಾರೆ. ಆದ್ದರಿಂದ ಶ್ಯಾನುಭೋಗರಿಗೆ ಕೊಡುವ ರೀತಿಯಲ್ಲಿ ಪಟೇಲರಿಗೂ ಪ್ರತಿ ತಿಂಗಳು 500.00 ರೂ.ಯನ್ನು ಕೊಡುವಂಥ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತಪೆಯೋ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಶ್ಯಾನುಭೋಗರುಗಳಿಗೆ 1990 ರಿಂದ ತಿಂಗಳಿಗೆ 500 ರೂ. ನಂತೆ ಸ್ಪೆಷಲ್ ಅಲೋಯೆನ್ಸ್ ಕೊಡುತ್ತಿದ್ದೇವೆ. ಅವರು ಕೋರ್ಟಿಗೆ ಹೋಗಿದ್ದರು. ಅವರ ಜೊತೆಯಲ್ಲಿ ವ್ಯವಹಾರ ಮಾಡಿ ಅದನ್ನು ಸೆಟ್ಲಮೆಂಟ್ ಮಾಡಿಕೊಂಡೆವು. ಪಟೇಲರು ನಮಗೂ ಕೊಡಬೇಕು ಎಂದು ಮಾಡಬೇಕಾಗಿತ್ತು. ಬಹಳ ವರ್ಷದಿಂದ ಕೇಳುತ್ತಿದ್ದಾರೆ. ಪಟೇಲರೂ ಕೂಡ ಬಹಳ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಊರಿನಲ್ಲಿ ಕಂದಾಯ ವಸೂಲಿ ಮಾಡುತ್ತಿದ್ದವರು ಪಟೇಲರು. ಕೇಸನ್ನು ಪೋಲಿಸ್ ಸ್ಟೇಷನ್‌ಗೆ ರಿಪೋರ್ಟ್ ಮಾಡುವವರೂ ಪಟೇಲರು. ಕಂದಾಯ ಶಾರ್ಟೇಜ್ ಆದರೆ ಪಟೇಲರು ತನ್ನ ಮನೆಯಿಂದ ಅಮೌಂಟನ್ನು ತಂದು ಕಟ್ಟಿ ನಂತರ ವಸೂಲಿ ಮಾಡಿಕೊಳ್ಳುತ್ತಿದ್ದರು. ಶ್ಯಾನುಭೋಗರು ಬರೀ ಲೆಕ್ಕ ಇಟ್ಟುಕೊಳ್ಳುತ್ತಿದ್ದರು. ಶ್ಯಾನುಭೋಗರಿಗೆ ಕೊಟ್ಟಾಗ ಪಟೇಲರಿಗೂ ಕೊಡಬೇಕಾಗಿತ್ತು. ಆದರೆ ಪಟೇಲರಿಗೆ ಕೊಡಲಿಲ್ಲ. ನನ್ನ ಹತ್ತಿರ ಅನೇಕ ಜನ ಪಟೇಲರೂ ಬಂದಿದ್ದರು. ಬಹಳ ವಯಸ್ಸಾಗಿದೆ. ಅನೇಕ ಜನ ಸತ್ತು ಹೋಗಿದ್ದಾರೆ. ಹಿಂದಿನ ಲೆಕ್ಕ 8,925 ಜನ ಎಂದು ಇತ್ತು. ಈಗ ಅವರ ಸಂಖ್ಯೆ ಕಡಿಮೆಯಾಗಿದೆ. ಆದುದರಿಂದ ಅವರಿಗೂ ಕೂಡ ಕೊಡಬೇಕೆಂದು ಹೇಳಿ ನಾನು ನನ್ನ ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟಿದ್ದೇನೆ. That matter is pending before the Government for consideration.

ಶ್ರೀ ಎ. ವಿ. ಉಮಾಪತಿ:– ಶ್ಯಾನುಭೋಗರ ಜೊತೆಯಲ್ಲಿ ಪಟೇಲರಿಗೂ ಕೊಡಬೇಕಾಗಿತ್ತು ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಪಟೇಲರು ಉತ್ತಮವಾಗಿ ಕೆಲಸ ಮಾಡಿದ್ದಾರೆ ಹಾಗೂ ನಡೆದುಕೊಂಡಿದ್ದಾರೆ' ಎಂದೂ ಮಾನ್ಯ ಸಚಿವರು ಹೇಳಿದ್ದಾರೆ. ಶ್ಯಾನುಭೋಗರು ಲೆಕ್ಕ ಮಾತ್ರ ಇಟ್ಟುಕೊಳ್ಳುತ್ತಿದ್ದರು ಎಂದೂ ಸಹ ಅವರು ಹೇಳಿದ್ದಾರೆ. ಹೆಚ್ಚು ಕೆಲಸ ಮಾಡುತ್ತಿದ್ದ ಪಟೇಲರಿಗೆ ಕೊಡದೇ ಶ್ಯಾನುಭೋಗರಿಗೆ ಕೊಟ್ಟಿರುವುದು ಮಲತಾಯಿ ಧೋರಣೆ ಮಾಡಿದಂತಾಗಿದೆ. ಬಹಳ ಕಷ್ಟದಲ್ಲಿ ಇರತಕ್ಕ ಪಟೇಲರಿಗೂ ಕೂಡ ಈ ವರ್ಷದಲ್ಲಿ ಕೊನೆಯ ಪಕ್ಷ 500 ರೂ. ಕೊಡತಕ್ಕ ಘೋಷಣೆಯನ್ನು ತಾವು ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ನನ್ನ ಲೆವಲ್‌ನಲ್ಲಿ 500 ರೂ. ಕೊಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಕ್ಯಾಬಿನೆಟ್‌ನಲ್ಲಿ ಈ ಸಬ್ಜೆಕ್ಟ್ ಬರಬೇಕಾಗಿದೆ. ಆ ಹಂತದಲ್ಲಿ ಇದು ಪೆಂಡಿಂಗ್ ಇದೆ.

ಶ್ರೀ ಎ. ನಾಗರಾಜ್:– ಮಾನ್ಯ ಅಧ್ಯಕ್ಷರೇ, ಪಟೇಲರಿಗೆ ಹೆಚ್ಚು ಮಾಡುವುದಕ್ಕೆ ಕ್ಯಾಬಿನೆಟ್ ಮುಂದೆ ಇದೆ ಎಂದು ಹೇಳುತ್ತಿದ್ದಾರೆ. ಇದರ ಜೊತೆಗೆ ತೋಟಿ, ತಳವಾರರು ಸಹಾ ಇದ್ದಾರೆ. ಬಹಳ ವರ್ಷಗಳಿಂದ ಶಾನುಭೋಗರು ಮತ್ತು ಪಟೇಲರ ಜೊತೆಗೆ ತೋಟಿ ತಳವಾರರು ಕೆಲಸ ಮಾಡಿಕೊಂಡಿದ್ದಾರೆ. ದಯವಿಟ್ಟು ಅವರಿಗೂ ಹೆಚ್ಚು ಮಾಡುವಂಥ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:– ಮಾನ್ಯ ಅಧ್ಯಕ್ಷರೇ, ಈಗ ವಿಲೇಜ್ ಅಕೌಂಟೆಂಟ್ ಕೆಲಸ ಬಹಳ ಅಸಮರ್ಪಕವಾಗಿದೆ ಎಂದು ಎಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಈ ಹಿನ್ನೆಲೆಯಲ್ಲಿ ಮತ್ತೆ

ಶ್ಯಾನುಭೋಗರು ಪಟೇಲರನ್ನು ಮತ್ತೆ ಇಟ್ಟುಕೊಳ್ಳುವ ಒಂದು ತೀವ್ರವಾದ ಪರಿಶೀಲನೆಯನ್ನು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೇ, ಅದು ಸೆಪರೇಟ್ ಪ್ರಶ್ನೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಆ ಪ್ರಶ್ನೆಯನ್ನು ಟೇಬಲ್ ಮಾಡಿದ್ದಾರೆ. ಅದು ಬಂದಾಗ ಈ ಪ್ರಶ್ನೆಯನ್ನು ಅವರು ಕೇಳಬಹುದು.

ಶ್ರೀ ಎಂ. ಪಿ. ವೆಂಕಟೇಶ್:– ಈ ರೀತಿ ಷಾಮಿರ ಜನರು ಇರಬಹುದು. ಈಗ ಎಷ್ಟೋ ಜನ ತೀರಿ ಹೋಗಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಶಿಫಾರಸ್ಸು ಮಾಡಿದ್ದೇನೆ ಎಂದು ಹೇಳಿದ್ದರು. ಮಂತ್ರಿಮಂಡಲದಲ್ಲಿ ಕೂಡಲೇ ಇದನ್ನು ಅಪ್ರೂವ್ ಮಾಡಿಸಿಕೊಟ್ಟರೆ ಬಹಳಷ್ಟು ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಪಟೇಲರ ಬಗ್ಗೆ ಹೆಸರು ಇದೆಯಲ್ಲಾ ಬಹಳ ದೊಡ್ಡ ಹೆಸರಿನ ರೀತಿ ಒಂದು ಇದೆ. ಅವತ್ತು ಯಜಮಾನಿಕೆ ಮಾಡಿ ಊರಿನ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದ. ಕಂದಾಯ ಸಂಗ್ರಹ ಮಾಡುತ್ತಿದ್ದ. ಈಗ ಇರುವ ವಿಲೇಜ್ ಅಕೌಂಟೆಂಟ್ ರೆವಿನ್ಯೂ ಇನ್ಸ್‌ಪೆಕ್ಟರ್ ವ್ಯವಸ್ಥೆಗೆ ಅದನ್ನು ಹೋಲಿಸಿದರೆ ಸಾಮಿರ ಪಾಲು ಉತ್ತಮ ಇತ್ತು. ತುಂಬಾ ಒಳ್ಳೆಯ ಸೇವೆಯನ್ನು ಅವರು ಮಾಡಿದ್ದಾರೆ. ಅನೇಕ ವರ್ಷಗಳಿಂದ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಪಟೇಲರಿಗೆ ಮಾಸಾಶನ ಕೊಡಬೇಕು ಎನ್ನುವ ದೃಷ್ಟಿಯಿಂದ ತಾವು ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ದಯಮಾಡಿ ಆದಷ್ಟು ಬೇಗ ಬಜೆಟ್ ಮುಗಿಯುವುದರೊಳಗೆ ನಿಮ್ಮ ಇಲಾಖೆ ಬೇಡಿಕೆಗೆ ಉತ್ತರ ಕೊಡುವುದರೊಳಗಾಗಿ ಇದನ್ನು ಕಾರ್ಯರೂಪಕ್ಕೆ ತಂದು ತಿಂಗಳಿಗೆ 500 ರೂಪಾಯಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

Sri M. Rajashekara Murthy:- I am more serious than the Hon'ble Member.

ಖಾತೆಗಳನ್ನು ಬದಲಾವಣೆ ಮಾಡುವಾಗ ರೈತರಿಗೆ ಕಿರುಕುಳ.

333 (1868): ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೈತರ ಭೂಮಿಯ ಖಾತೆಗಳನ್ನು ಬದಲಾವಣೆ ಮಾಡುವಾಗ ರೈತರಿಗೆ ಆಗುತ್ತಿರುವ ಕಿರುಕುಳಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈ ಕಿರುಕುಳಗಳನ್ನು ತಪ್ಪಿಸಲು ಕಾರ್ಯಕ್ರಮಗಳೇನಾದರೂ ಇದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. 1. ಗ್ರಾಮ ಸಭೆ, ದಫ್ತರ್ ತಪಾಸಣೆ ಕಂದಾಯ ಅಧಿಕಾರಿಗಳ ಸಭೆಗಳಲ್ಲಿ ಹಕ್ಕು ಬದಲಾವಣೆ ಪ್ರಕರಣಗಳ ವಿಲೇವಾರಿ ಬಗ್ಗೆ ಪರಾಮರ್ಶೆ (ರಿವ್ಯೂ) ಮಾಡಲಾಗುತ್ತಿದೆ.

2. ಇದರ ಜೊತೆಗೆ ಭೂಮಿಯ ಮಾಲೀಕತ್ವದ ಹಕ್ಕು ಬದಲಾವಣೆ ಅಧಿಕಾರವನ್ನು ರಾಜಸ್ವ ನಿರೀಕ್ಷಕರಿಂದ ತೆಗೆದು ತಹಸೀಲ್ದಾರ್‌ರವರಿಗೆ ನೀಡುವ ಬಗ್ಗೆ ಭೂ ಕಂದಾಯ ನಿಯಮಗಳ ತಿದ್ದುಪಡಿಯ ಪ್ರಸ್ತಾವನೆ ಸರ್ಕಾರದ ಮುಂದಿದೆ.